**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 615/2021**

| | | |
|---|---|---|
| ಹೆಸರು | ಶರಣಬಸಯ್ಯ | ಪಿಡಬ್ಲ್ಯೂ -01<br>ಸಿಡಬ್ಲ್ಯೂ - 01 |
| ತಂದೆಯ ಹೆಸರು | ಸಿದ್ದಬಸಯ್ಯ | |
| ವಯಸ್ಸು | 47 ವರ್ಷ | |
| ಉದ್ಯೋಗ | ದೇವಸ್ಥಾನದ ಅರ್ಚಕರು | ದಿ: 10.08.2023 |
| ವಾಸ ಸ್ಥಳ | ಹಳೇ ಹರ್ಲಾಪುರ, ಹರಿಹರ | |
| ಮುಖ್ಯ ವಿಚಾರಣೆ | ಸಹಾಯಕ ಸರ್ಕಾರಿ ಅಭಿಯೋಜಕರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ನೋಡಿರುತ್ತೇನೆ.

2. ದಿಃ 24.08.2020 ರಂದು ರಾತ್ರಿ 9.30 ಗಂಟೆಗೆ ಗಣೇಶ್ ಮೂರ್ತಿಯನ್ನು ವಿಸರ್ಜನೆಯನ್ನು ಮಾಡಿ, ದೇವಸ್ಥಾನದ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದು, ಮಾರನೇ ದಿನ ದಿಃ 25.08.2020 ರಂದು ಬೆ.8.30 ಗಂಟೆ ಸುಮಾರಿಗೆ ದೇವಸ್ಥಾನಕ್ಕೆ ಬಂದು ನೋಡಿದಾಗ ದೇವಸ್ಥಾನದ ಗೇಟ್ ಗೆ ಹಾಕಿದ್ದ ಬೀಗ ಒಡೆದಿದ್ದು, ಒಳಗೆ ಹೋಗಿ ನೋಡಲಾಗಿ, ಕಾಣಿಕೆ ಹುಂಡಿ ಸಹ ಒಡೆದಿದ್ದು, ಅದರಲ್ಲಿದ್ದ ಹಣ ಕಳ್ಳನತವಾಗಿತ್ತು ಹಾಗೂ ದೇವಸ್ಥಾನದಲ್ಲಿದ್ದ ಪಂಚಲೋಹದ ಗಂಟೆ, ಆಂಜನೇಯ ಸ್ವಾಮಿಯ ಬೆಳ್ಳಿ ಕರಡಿಗೆ ಸಹ ಕಳ್ಳತನವಾಗಿರುತ್ತದೆ. ಅದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿ ದೇವಸ್ಥಾನ ಕಳ್ಳತನವಾದ ಬಗ್ಗೆ ದೂರನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ದೂರಿನಲ್ಲಿರುವ ಸಹಿ ನನ್ನದು. ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ದೇವಸ್ಥಾನಕ್ಕೆ ಬಂದು ಸ್ಥಳ ಪರೀಶೀಲನೆ ಮಾಡಿ, ಮಹಜರು ಮಾಡಿ, ಪಂಚರ ಸಮಕ್ಷಮ ಪೋಟೋ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋವನ್ನು ನಿಪಿ-3 ಗುರುತಿಸಲಾಯಿತು.

4. ಇದಾದ 8 ದಿನಗಳ ನಂತರ ಪೊಲೀಸರು ನಮ್ಮ ದೇವಸ್ಥಾನ ಕಳ್ಳತನ ಮಾಡಿದ ವ್ಯಕ್ತಿಗಳು

ಸಿಕ್ಕಿರುತ್ತಾರೆ ಎಂದು ಒಬ್ಬ ವ್ಯಕ್ತಿಯನ್ನು ನಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಬಂದಿದ್ದು, ಆತನನ್ನು ವಿಚಾರಣೆ ಮಾಡಿ, ಫೋಟೋ ತೆಗೆದಿರುತ್ತಾರೆ.

5. ನಮ್ಮ ದೇವಸ್ಥಾನದ ಕಳ್ಳತನವನ್ನು 3 ಜನರು ಸೇರಿ ಮಾಡಿರುತ್ತಾರೆ ಎಂದು ಪೊಲೀಸರಿಂದ ಕೇಳಿ ಗೊತ್ತಾಗಿರುತ್ತದೆ. ನಮ್ಮ ದೇವಸ್ಥಾನದ ಮಹಜರು ಕಾಲಕ್ಕೆ ಪೊಲೀಸರು ಕರೆದುಕೊಂಡು ಬಂದ ಒಬ್ಬ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದೇವಸ್ಥಾನದಲ್ಲಿ ಕಳ್ಳತನವಾದ ಗಂಟೆ, ಆಂಜನೇಯ ಸ್ವಾಮಿಯ ಕರಡಿಗೆ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಗಂಟೆ ಹಾಗೂ ಆಂಜನೇಯ ಸ್ವಾಮಿಯ ಕರಡಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುಮಾ.1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಮು.ಮಾ.1 ಮತ್ತು 2 ನೇದವುಗಳನ್ನು ಆರೋಪಿತರ ವಿರುದ್ಧ ಚಾಲ್ತಿಯಲ್ಲಿರುವ ಇನ್ನೊಂದು ಪ್ರಕರಣ ಸಿಸಿ ನಂ. 1637/2020 ರಲ್ಲಿಯ ಪಿ ಎಫ್ ನಂ.98/2020 ರಲ್ಲಿ ಜಪ್ತಿಪಡಿಸಿಕೊಳ್ಳಲಾಗಿರುತ್ತದೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀಮತಿ ಎಸ್ ಪಿ ಎಸ್ ವಕೀಲರಿಂದಃ**

6. ಆಂಜನೇಯ ಸ್ವಾಮಿಯ ದೇವಸ್ಥಾನದ ಸುತ್ತಮುತ್ತ ಮನೆಗಳು, ರಸ್ತೆಗಳು, ಅಂಗಡಿಗಳು ಇರುತ್ತವೆ ಎಂದರೆ ಸರಿ. ಆಗಸ್ಟ್ ತಿಂಗಳ ಪೂರ್ತಿ ಗಣೇಶ್ ಮೂರ್ತಿಯನ್ನು ವಿಸರ್ಜನೆ ಮಾಡುವ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ ಎಂದರೆ ಸರಿ ಆದ್ದರಿಂದ ಬೆಳಕು ಹರಿಯುವವರೆಗೂ ಸಹ ಜನರು ಓಡಾಡುತ್ತಿರುತ್ತಾರೆ ಹಾಗೂ ಪೊಲೀಸರ ಬಂದೋಬಸ್ತ್ ಸಹ ಇರುತ್ತದೆ ಎಂದರೆ ಸರಿ. ದೂರನ್ನು ನಾನು ಸ್ವಯಂ ಪ್ರೇರಿತವಾಗಿ ಕೊಟ್ಟಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಕಳ್ಳತನ ಹೇಗೆ ಮತ್ತು ಯಾವ ಸಮಯದಲ್ಲಿ ಆಗಿರುತ್ತದೆ ಎಂದು ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಮರುದಿನ ಬೆಳಿಗ್ಗೆ ಬಂದು ನೋಡಿದಾಗ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ದೂರಿನಲ್ಲಿ ಹೇಳಿದಂತೆ ಹುಂಡಿಯ ಹಣ ಅಷ್ಟು ಇತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಆರೋಪಿತರನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು 2 ನೇ ಆರೋಪಿಯನ್ನು ಮಹಜರು ಕಾಲದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

7. ಆರೋಪಿತರು ಕಳ್ಳತನ ಮಾಡಿರುತ್ತಾರೆ ಎಂದು ಪೊಲೀಸರು ಹೇಳಿದ ಮೇರೆಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ದೇವಸ್ಥಾನದ ಗೇಟ್ ಗೆ ಹಾಕಿದ ಮುರಿದ ಬೀಗವನ್ನು

ಪೊಲೀಸರು ಜಪ್ತಿ ಪಡಿಸಿಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೀಗ ಅಕ್ಕಪಕ್ಕದಲ್ಲಿ ಎಲ್ಲಿಯೂ ಇರಲಿಲ್ಲ ಎಂದು ಹೇಳುತ್ತಾರೆ. ಮು.ಮಾ.1 ಮತ್ತು 2 ಕ್ಕೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುವುದಿಲ್ಲ. ಮು.ಮಾ.1 ತರಹದ ಗಂಟೆಗಳು ಎಲ್ಲಾ ಬಾಂಡೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಅದೇ ರೀತಿ ಮು.ಮಾ.2 ನೇ ತರಹದ ಕರಡಿಗೆ ಎಲ್ಲಾ ಬೆಳ್ಳಿ ಬಂಗಾರದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ.2 ನ್ನು ಭಕ್ತರಿಂದ ಸ್ವೀಕರಿಸಿದ ಬಗ್ಗೆ ನಮ್ಮ ದೇವಸ್ಥಾನದಿಂದ ರಸೀದಿಯನ್ನು ನೀಡಿರುವುದಿಲ್ಲ. ಆರೋಪಿತರಿಗೂ ಹಾಗೂ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮು.ಮಾ.1 ಮತ್ತು 2 ಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಆರೋಪಿತರ ವಿರುದ್ಧ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ಮತ್ತು 3 **ನೇ ಆರೋಪಿ ಪರ ಶ್ರೀ ಎನ್ ಎಲ್ ವಕೀಲರಿಂದಃ**

8. ಹರ್ಲಾಪುರದ ಜನಸಂಖ್ಯೆ 800-1000 ಇರಬಹುದು. ನಮ್ಮ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಗಣೇಶ ಮೂರ್ತಿಯನ್ನು ಯಾವ ದಿನದಂದು ಪ್ರತಿಷ್ಠಾಪನೆ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಯಾವುದೇ ಕಮಿಟಿ ಇರುವುದಿಲ್ಲ. ದೇವಸ್ಥಾನಕ್ಕೆ ಒಬ್ಬರು ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಇರುತ್ತಾರೆ. ನಾನು ಸದರಿ ದೇವಸ್ಥಾನದ ಅರ್ಚಕನಾಗಿರುತ್ತೇನೆ. ನನಗೆ ಸರ್ಕಾರದಿಂದ ಯಾವುದೇ ಸಂಬಳ ಇರುವುದಿಲ್ಲ. ದೇವಸ್ಥಾನದ ವಸ್ತುಗಳಿಗೆ ಸಂಬಂಧಿಸಿದಂತೆ ಏನಾದರೂ ನಿರ್ಧಾರ ಮಾಡಬೇಕಾದರೆ ಕಮಿಟಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಎಲ್ಲರೂ ಚರ್ಚೆ ಮಾಡಿ, ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಅದೇ ರೀತಿ ದೇವಸ್ಥಾನದಲ್ಲಿ ಯಾವುದಾದರೂ ಕಾರ್ಯಕ್ರಮ ಮಾಡಬೇಕಾದರೂ ಸಹ ಎಲ್ಲಾರೂ ಸೇರಿ ಚರ್ಚೆ ಮಾಡಿ ನಿರ್ಧರಿಸಿರುತ್ತಾರೆ ಎಂದರೆ ಸರಿ. ದೇವಸ್ಥಾನಕ್ಕೆ ಭಕ್ತಾಧಿಗಳು ಸಾಕಷ್ಟು ಹಣ, ಬಂಗಾರದ, ಬೆಳ್ಳಿಯ ಒಡವೆಗಳನ್ನು ಕೊಡುತ್ತಾರೆ ಎಂದರೆ ಸರಿ. ನಮ್ಮ ದೇವಸ್ಥಾನದಲ್ಲಿ ಭಕ್ತಾಧಿಗಳಿಂದ ಪಡೆದ ಹಣ, ಬಂಗಾರ, ಬೆಳ್ಳಿಯ ಒಡವೆಗಳ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

9. ಮು.ಮಾ.1 ಮತ್ತು 2 ನೇ ತರಹದ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ದೇವಸ್ಥಾನಗಳಲ್ಲಿ ಇರುತ್ತವೆ ಎಂದರೆ ಸರಿ. ಮು.ಮಾ.1 ರ ತೂಕ ನನಗೆ ಹೇಳಲು ಆಗುವುದಿಲ್ಲ. 2 ನೇ ಆರೋಪಿಯ ಪೂರ್ಣ ಹೆಸರು, ಉದ್ಯೋಗ, ವಿಳಾಸ ನನಗೆ ಗೊತ್ತಿಲ್ಲ. ಆತನನ್ನು ಈ ಮುಂಚೆ ನಾನು ನೋಡಿರುವುದಿಲ್ಲ. ಆತನ ಮುಖ ಪರಿಚಯ ನನಗೆ ಇರುವುದಿಲ್ಲ. ಈ ದಿನ

ನ್ಯಾಯಾಲಯದ ಮುಂದಿರುವ 3 ಆರೋಪಿತರ ಪೈಕಿ 2 ನೇ ಆರೋಪಿ ಯಾರು ಇರುತ್ತಾರೆ ಎಂದು ನನಗೆ ಗುರುತಿಸಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಮ್ಮ ದೇವಸ್ಥಾನದಲ್ಲಿ ಯಾವುದೇ ರೀತಿಯ ಕಳ್ಳತನವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮು.ಮಾ.1 ಮತ್ತು 2 ಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸಿ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ನಿಪಿ–1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಕಳ್ಳತನವಾದ ಬಗ್ಗೆ ಮಾಹಿತಿ ಇದ್ದು, ಮುಂದೆ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ನ್ನು ಠಾಣೆಯಲ್ಲಿಯೇ ಬೆರಳಚ್ಚು ಮಾಡಿಸಿರುತ್ತೇನೆ. ಪೊಲೀಸರು ನಿಪಿ–1 ಕ್ಕೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

(ಉಳಿದಂತೆ 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು 2 ಮತ್ತು 3 ನೇ ಆರೋಪಿತರ ಪರವಾಗಿ ಅಳವಡಿಸಿಕೊಳ್ಳಲು ಆರೋಪಿತರ ಪರ ವಕೀಲರು ವಿನಂತಿಸಿಕೊಂಡಿದ್ದರಿಂದ ಅವರ ವಿನಂತಿ ಮೇರೆಗೆ ಅಳವಡಿಸಿಕೊಳ್ಳಲಾಯಿತು.)

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.